ಬೆವಿಕಂ
BESCOM

# ಬೆಸ್ಕಾಂ ಸ್ನೇಹಿ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಗೃಹಪತ್ರಿಕೆ

ಸಂಪುಟ-9 ಸಂಚಿಕೆ-3 ತ್ರೈಮಾಸಿಕ ಜುಲೈ-ಸೆಪ್ಟೆಂಬರ್ 2022 ಪುಟಗಳು-12



# ವಿದ್ಯುತ್ ದುರಸ್ಥಿ ಕಾರ್ಯದಲ್ಲಿ ಬೆವಿಕಂ ಸಿಬ್ಬಂದಿ



ಇತ್ತೀಚೆಗೆ ಸುರಿದ ಭಾರೀ ಮಳೆಗೆ ಬೆವಿಕಂ ಪವರ್‌ಮೆನ್‌ಗಳು ತಮ್ಮ ಜೀವವನ್ನು ಲೆಕ್ಕಿಸದೆ, ವಿದ್ಯುತ್ ದುರಸ್ಥಿ ಕಾರ್ಯದಲ್ಲಿ ತೊಡಗಿರುವುದು.
ಹಿರಿಯೂರಿನ ವೇದಾವತಿ ನದಿ ಮಧ್ಯಭಾಗದಲ್ಲಿ ತುಂಡಾದ ವಿದ್ಯುತ್ ತಂತಿಯನ್ನು ಬೆವಿಕಂ ಸಿಬ್ಬಂದಿ ಈಜಿಕೊಂಡು ಹೋಗಿ ದುರಸ್ಥಿಯಲ್ಲಿ ತೊಡಗಿರುವುದು.





ಕೊರಟಗೆರೆ ಪಟ್ಟಣದ ಗಂಗಾಧಾರೇಶ್ವರ ಬೆಟ್ಟದಲ್ಲಿ ಮುರಿದ ವಿದ್ಯುತ್ ಕಂಬವನ್ನು ಬದಲಿಸುವ ಕಾರ್ಯದಲ್ಲಿ ತೊಡಗಿರುವ ಬೆವಿಕಂ ಸಿಬ್ಬಂದಿ, ಕಡಿದಾದ ಬೆಟ್ಟದ ಮೇಲೆಗಡೆ ವಿದ್ಯುತ್ ಕಂಬವನ್ನು ಕೊಂಡೊಯ್ಯುತ್ತಿರುವ ಬೆವಿಕಂ ಸಿಬ್ಬಂದಿ.



ಮಳೆಯಿಂದಾಗಿ ನದಿಗಳು ಉಕ್ಕಿ ಹರಿಯುತ್ತಿದ್ದರೂ ಅದನ್ನು ಲೆಕ್ಕಿಸದೆ, ತೆಪ್ಪದಲ್ಲಿ ಹೋಗಿ ವಿದ್ಯುತ್ ಮರು ಸ್ಥಾಪನೆಯಲ್ಲಿ ತೊಡಗಿರುವ ಬೆವಿಕಂ ಸಿಬ್ಬಂದಿ, ಸ್ಥಳ ಲಕ್ಕೂರು, ಮಾಲೂರು ಉಪ ವಿಭಾಗ.

# ಮಾನ್ಯ ವ್ಯವಸ್ಥಾಪಕ ನಿರ್ದೇಶಕರ ನುಡಿ



ಬೆಸ್ಕಾಂನ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸಿಬ್ಬಂದಿ ವರ್ಗದವರಿಗೂ ದಸರಾ ಹಾಗೂ ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು. ಬೆಸ್ಕಾಂನ ಗ್ರಾಹಕಸ್ನೇಹಿ ಸೇವೆಯಲ್ಲಿ ತಮ್ಮೆಲ್ಲರ ಪಾತ್ರ ಬಹಳ ಮುಖ್ಯವಾದುದು. ನಿರಂತರ ಪರಿಶ್ರಮದೊಂದಿಗೆ, ಗ್ರಾಹಕರಿಗೆ ಉತ್ತಮ ಸೇವೆ ನೀಡುವ ನಿಟ್ಟಿನಲ್ಲಿ ತಮ್ಮೆಲ್ಲರ ಶ್ರಮ ಅವರ್ಣನೀಯವಾದುದು.

ಗ್ರಾಹಕರಿಗೆ ವ್ಯತ್ಯಯರಹಿತ ವಿದ್ಯುತ್ ನೀಡುವ ಬೆಸ್ಕಾಂನ ಧ್ಯೇಯಕ್ಕನುಗುಣವಾಗಿ, ಬೆಸ್ಕಾಂ ಕಾರ್ಯವ್ಯಾಪ್ತಿಯಲ್ಲಿ ಹಲವು ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಾಗಿದೆ. ಹೆಚ್.ಟಿ ವಿದ್ಯುತ್ ತಂತಿಗಳನ್ನು ಭೂಗತ ವಿದ್ಯುತ್ ಕೇಬಲ್'ಗಳಾಗಿ ಬದಲಾಯಿಸುವುದು ಮತ್ತು ಎಲ್.ಟಿ ಮೇಲ್ಮಾರ್ಗ ವಿದ್ಯುತ್ ತಂತಿಗಳನ್ನು ಏರಿಯಲ್ ಬಂಡಲ್ಡ್ ಕೇಬಲ್'ಗಳಾಗಿ ಬದಲಾಯಿಸುವ ಕಾಮಗಾರಿ ಪ್ರಗತಿಯಲ್ಲಿದ್ದು, ಬೆಂಗಳೂರು ನಗರದಾದ್ಯಂತ ಸುರಕ್ಷಿತ ವಿದ್ಯುತ್ ಪೂರೈಕೆಗೆ ಬೆಸ್ಕಾಂ ಶ್ರಮಿಸುತ್ತಿದೆ.

ಈ ನಡುವೆ, ಬೆಸ್ಕಾಂ ವಿದ್ಯುತ್ ಜಾಲ ಮತ್ತು ಬೆಸ್ಕಾಂ ವಿದ್ಯುತ್ ಕಂಬಗಳ ಸಮೀಪ ಕಾರ್ಯನಿರ್ವಹಿಸುವಾಗ ಸಾರ್ವಜನಿಕರಿಗೆ ಪ್ರಾಣಹಾನಿ ಸಂಭವಿಸಿರುವ ಪ್ರಕರಣಗಳು ನಡೆದುಹೋಗಿವೆ. ವಿದ್ಯುತ್ ಬಳಕೆಯ ಕುರಿತಾದ ಮುಂಜಾಗ್ರತಾ ಕ್ರಮಗಳ ಕುರಿತು ಬೆಸ್ಕಾಂ ಎಚ್ಚರಿಕೆ ನೀಡಿ ಜಾಗೃತಿ ಮೂಡಿಸಿದ್ದರೂ ಕೂಡ, ಹಲವರ ನಿರ್ಲಕ್ಷ್ಯದಿಂದ ವಿದ್ಯುತ್ ಅಪಘಾತಗಳು ಸಂಭವಿಸಿರುವುದು ದುರದೃಷ್ಟಕರ. ಆ ನಿಟ್ಟಿನಲ್ಲಿ ಗ್ರಾಹಕರ ಸುರಕ್ಷತೆಗೆ ಹೆಚ್ಚಿನ ಮಹತ್ವ ನೀಡುವಲ್ಲಿ ಬೆಸ್ಕಾಂ ಕಾರ್ಯೋನ್ಮುಖವಾಗಬೇಕಿದೆ.

ವಿದ್ಯುತ್ ಕಂಬಗಳ ಸಮೀಪ ಕಟ್ಟಡ ನಿರ್ಮಿಸುವುದು, ಬೆಸ್ಕಾಂನ ಅನುಮತಿಯಿಲ್ಲದೆ ಜಾಹೀರಾತು ಫಲಕಗಳಿಗೆ ವಿದ್ಯುತ್ ಸಂಪರ್ಕ ನೀಡುವುದು, ಪವರ್'ಮ್ಯಾನ್'ಗಳ ಸಹಾಯವಿಲ್ಲದೆ ವಿದ್ಯುತ್ ಜಾಲಗಳ ದುರಸ್ತಿಗೆ ತೆರಳುವುದು, ಮಳೆ-ಗಾಳಿಯ ಸಮಯದಲ್ಲಿ ವಿದ್ಯುತ್ ಜಾಲಗಳ ಸಮೀಪ ತೆರಳುವುದು ಮುಂತಾದ ಪ್ರಯತ್ನಗಳು ವಿದ್ಯುತ್ ಅಪಘಾತಗಳಿಗೆ ಎಡೆಮಾಡಿಕೊಡುವುದರಿಂದ ಗ್ರಾಹಕರಲ್ಲಿ ಅಂತಹ ಪ್ರಯತ್ನಗಳ ಕುರಿತು ಜಾಗೃತಿ ಮೂಡಿಸುವುದು ಅತ್ಯಗತ್ಯವಾಗಿದೆ.

ಇದಲ್ಲದೇ, ಗ್ರಾಹಕರಿಗಾಗಿ ತಂದ ಯೋಜನೆಗಳಾದ ಬೆಳಕು ಯೋಜನೆ, ವಿದ್ಯುತ್ ಅದಾಲತ್, ವಾಟ್ಸಾಪ್ ಸಹಾಯವಾಣಿ ಮುಂತಾದ ಯೋಜನೆಗಳ ಕುರಿತು ಗ್ರಾಹಕರಿಗೆ ಅರಿವು ಮೂಡಿಸಬೇಕಿದ್ದು, ಬೆಸ್ಕಾಂನ ಎಲ್ಲಾ ಅಧಿಕಾರಿಗಳು, ಸಿಬ್ಬಂದಿಗಳು ಈ ನಿಟ್ಟಿನಲ್ಲಿ ಇನ್ನಷ್ಟು ಶ್ರಮವಹಿಸಿ ಕಾರ್ಯಪ್ರವೃತ್ತರಾಗಬೇಕಾಗಿದೆ.

ಗ್ರಾಹಕಸ್ನೇಹಿ ಸೇವೆಯನ್ನೇ ಧ್ಯೇಯವಾಗಿರಿಸಿಕೊಂಡಿರುವ ಬೆಸ್ಕಾಂನ ಯೋಜನೆಗಳನ್ನು ಜನತೆಗೆ ತಲುಪಿಸುವಲ್ಲಿ ತಮ್ಮ ಸಹಕಾರ ಅತ್ಯಗತ್ಯವಾಗಿದೆ. ಆ ನಿಟ್ಟಿನಲ್ಲಿ ಇನ್ನಷ್ಟು ಮುತುವರ್ಜಿಯೊಂದಿಗೆ ಸೇವೆಗೈಯುವಲ್ಲಿ ತಮ್ಮ ನಿರಂತರ ಪಾಲ್ಗೊಳ್ಳುವಿಕೆಯನ್ನು ನಿರೀಕ್ಷಿಸುತ್ತೇನೆ ಹಾಗೂ ಗ್ರಾಹಕರ ಸೇವೆಯಲ್ಲಿ ಇನ್ನಷ್ಟು ಉತ್ತಮವಾಗಿ ತೊಡಗಿಸಿಕೊಳ್ಳುವಂತಾಗಲಿ ಎಂದು ಹಾರೈಸುತ್ತೇನೆ.

**ಮಹಾಂತೇಶ ಬೀಳಗಿ**
ವ್ಯವಸ್ಥಾಪಕ ನಿರ್ದೇಶಕರು, ಬೆವಿಕಂ

## ಸಂಪಾದಕೀಯ



ಆತ್ಮೀಯರೆ,

ಎಲ್ಲರಿಗೂ ಶರನ್ನಾವರಾತ್ರಿ ಹಬ್ಬದ ಶುಭಾಶಯಗಳು. ನಾಡದೇವತೆ ತಾಯಿ ಚಾಮುಂಡೇಶ್ವರಿ ಎಲ್ಲರಿಗೂ ಆಯುರ್ಆರೋಗ್ಯ ಕೊಟ್ಟು ಕಾಪಾಡಲಿ. ದುಷ್ಟ ಶಕ್ತಿಯ ಸಂಹಾರದ ಸಂಕೇತವಾಗಿ ಆಚರಿಸುವ ನವರಾತ್ರಿಯನ್ನು ಜನತೆ ಸಂಭ್ರಮದಿಂದ ಭರಮಾಡಿಕೊಂಡಿದ್ದಾರೆ.

ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳಲ್ಲಿ ರಾಜ್ಯಾದ್ಯಂತ ಧಾರಾಕಾರ ಮಳೆ ಉಂಟಾಗಿತ್ತು. ಬೆವಿಕಂನ ವ್ಯಾಪ್ತಿಯ 8 ಜಿಲ್ಲೆಗಳಲ್ಲಿ ವ್ಯಾಪಕ ಮಳೆ ಆಗಿ, ಕೆರೆ-ಕಟ್ಟೆಗಳು ಉಕ್ಕಿ ಹರಿದ್ದಿದ್ದುವು .ಇದುವರೆವಿಗೂ ತುಂಬದ ಕೆರೆಗಳು ಈ ಬಾರಿಯ ಮಳೆಗೆ ತುಂಬಿ ಕೋಡಿ ಬಿದ್ದಿದ್ದವು.ಈ ಸಂದರ್ಭದಲ್ಲಿ ನಮ್ಮ ಸಿಬ್ಬಂದಿಗಳು ಹಗಲು ರಾತ್ರಿ ಎನ್ನದೆ ಕಾರ್ಯಚರಣೆ ಮಾಡಿ ಗ್ರಾಹಕರಿಗೆ ವಿದ್ಯುತ್ ಪೂರೈಕೆ ಮಾಡಿದ್ದಾರೆ. ನಮ್ಮ ಪವರ್‌ಮ್ಯಾನ್‌ಗಳು ಜೀವದ ಹಂಗು ತೊರೆದು ಕೆರೆಯಲ್ಲಿ ಈಜಿಕೊಂಡು ಹೋಗಿ ವಿದ್ಯುತ್ ಪೂರೈಸಿ ಸಾರ್ವಜನಿಕರ ಪ್ರಶಂಸೆಗೂ ಸಹ ಪಾತ್ರರಾಗಿದ್ದಾರೆ.

ನಮ್ಮ ಪವರ್‌ಮ್ಯಾನ್‌ಗಳು ಅತ್ಯುತ್ಸಾಹದಿಂದ ವಿದ್ಯುತ್ ಪೂರೈಸುವ ಕೆಲಸದಲ್ಲಿ ತೊಡಗಿದ್ದು, ಅಂತಹ ಸಂದರ್ಭದಲ್ಲಿ ಸುರಕ್ಷತೆ ಬಗ್ಗೆ ಹೆಚ್ಚಿನ ಕಾಳಜಿವಹಿಸಲು ವಿನಂತಿ. ಕಣ್ಣಿಗೆ ಕಾಣದ ಅಪಾಯದ ಜತೆ ದಿನ ನಿತ್ಯ ವ್ಯವಹರಿಸುವ ಸಂದರ್ಭದಲ್ಲಿ ಸೂಕ್ತ ಸುರಕ್ಷತೆ ಕ್ರಮಗಳನ್ನು ಕೈಗೊಳ್ಳುವುದು ಕಡ್ಡಾಯ.

ಈ ಬಾರಿ ಬಹಳ ವಿದ್ಯುತ್ ಅವಘಡಗಳು ಸಂಭವಿಸಿದ್ದು, ಗ್ರಾಹಕರು ಮಳೆ ಸಂದರ್ಭದಲ್ಲಿ ಬಹಳ ಎಚ್ಚರವಹಿಸುವ ಅತ್ಯಗತ್ಯವಿದೆ. ವಿದ್ಯುತ್ ಸಂಬಂಧಿತ ಯಾವುದೇ ದೂರುಗಳು ಬಂದರೆ, ನಮ್ಮ ಸಿಬ್ಬಂದಿ ಸೂಕ್ತ ಕ್ರಮಕೈಗೊಂಡು, ಅದ್ಯತೆ ಮೇರೆಗೆ ಪರಿಹರಿಸುವುದು.

**ಎಸ್.ಆರ್.ನಾಗರಾಜ**
ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ.), ಬೆವಿಕಂ.

# ಇವಿ ಅಭಿಯಾನ- ಇವಿ ಎಕ್ಸ್ ಪೊ

**ಬೆಸ್ಕಾಂನ ಇವಿ ಉತ್ತೇಜನಕ್ಕೆ ಮತ್ತಷ್ಟು ವೇಗ ನೀಡಿದ್ದು, ಜುಲೈ 1 ರಿಂದ 3 ರವರೆಗೆ ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ಇವಿ ಎಕ್ಸ್ ಪೊ ಬೆಸ್ಕಾಂನ ಯಶಸ್ವಿ ಕಾರ್ಯಕ್ರಮಗಳಲ್ಲೊಂದಾಗಿದೆ.**

ಇವಿ ವಲಯದಲ್ಲಿ ತೊಡಗಿಕೊಂಡಿರುವ ಉತ್ಪಾದಕರು, ಪೂರೈಕೆದಾರರು ಮತ್ತು ಬಳಕೆದಾರರನ್ನು ಒಂದೇ ವೇದಿಕೆಗೆ ತಂದು ಇವಿ ಬಳಕೆಯನ್ನು ಪ್ರೋತ್ಸಾಹಿಸುವುದು, ಇವಿ ಉತ್ತೇಜನಕ್ಕೆ ಸರಕಾರ ಕೈಗೊಂಡಿರುವ ಕ್ರಮಗಳು ಮತ್ತು ನೀತಿಗಳ ಕುರಿತು ಮಾಹಿತಿ



ಒದಗಿಸುವುದೇ ಇವಿ ಎಕ್ಸ್‌ಪೊದ ಮುಖ್ಯ ಉದ್ದೇಶವಾಗಿತ್ತು. ಒಂದು ವಾರಗಳ ಇವಿ ಅಭಿಯಾನದ ಭಾಗವಾಗಿ ಮೂರು ದಿನಗಳ ಇವಿ ಎಕ್ಸ್‌ಪೊ ವನ್ನು ಬೆಸ್ಕಾಂ ಆಯೋಜಿಸಿತ್ತು. ಎಕ್ಸಪೊ ಯಶಸ್ವಿ ಬೆಸ್ಕಾಂಗೆ ಇವಿ ವಲಯ ಉತ್ತೇಜನಕ್ಕೆ ಗಟ್ಟಿ ಅಡಿಪಾಯವನ್ನು ಹಾಕಿಕೊಟ್ಟಿದೆ.

ಇವಿ ಎಕ್ಸ್ ಪೊ ಕಾರ್ಯಕ್ರಮಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳಾದ **ಶ್ರೀ ಬಸವರಾಜ ಬೊಮ್ಮಾಯಿ** ಅವರು ಚಾಲನೆ ನೀಡಿದರು. ಕೇಂದ್ರದ ಇಂಧನ ಮತ್ತು ನವೀಕರಿಸಬಹುದಾದ ಇಂಧನ ಖಾತೆ ರಾಜ್ಯ ಸಚಿವ **ಶ್ರೀ ಭಗವಂತ ಖೂಭ** ಮತ್ತು ಇಂಧನ ಸಚಿವರಾದ ಸನ್ಮಾನ್ಯ **ಶ್ರೀ ವಿ. ಸುನಿಲ್ ಕುಮಾರ್** ಅವರು ಇವಿ ಮಿತ್ರ ಆಪ್ ಮತ್ತು ಬೆಸ್ಕಾಂ ಸಿಂಗಲ್ ವಿಂಡೋ ಡ್ಯಾಷ್ ಬೋರ್ಡ್ ಉದ್ಘಾಟನೆ ಮಾಡಿದರು.

ಇವಿ ಎಕ್ಸ್‌ಪೊ ಉದ್ಘಾಟನೆ ಕಾರ್ಯಕ್ರಮದಲ್ಲಿ ರಾಜ್ಯದಲ್ಲಿ ಇವಿ ಚಾರ್ಜಿಂಗ್ ಸ್ಟೇಷನ್‌ಗಳ ಸ್ಥಾಪನೆ ಕುರಿತಂತೆ ಬೆಸ್ಕಾಂ ಇಂದು 9 ಪ್ರಮುಖ ಖಾಸಗಿ ಕಂಪನಿಗಳ ಜತೆ ಒಡಂಬಡಿಕೆ ಮಾಡಿಕೊಂಡಿತು. ಬೈಕ್ ಕೆಫೆ, ಮೈಲ್ ಬೋರ್ಕ್, ಬೋಲ್ಟ್, ಬೆನ್ ಎಸ್ ಸಿಎಲ್, ಮೈ ಇವಿ ಸ್ಟೋರ್ ಎಲ್ ಎಲ್ ಪಿ, ಮತ್ತು ಚಾಮುಂಡಿ ಹೋಟೆಲ್ ಪ್ರೈವೆಟ್ ಲಿಮಿಟೆಡ್ ಜತೆ ಬೆಸ್ಕಾಂ, ಚಾರ್ಜಿಂಗ್ ಸ್ಟೇಷನ್ ನಿರ್ಮಾಣಕ್ಕೆ ಒಪ್ಪಂದ ಮಾಡಿಕೊಂಡಿದೆ.

ಇವಿ ಎಕ್ಪೊ ಉದ್ಘಾಟನೆಯಲ್ಲಿ ಬೆಸ್ಕಾಂ ನ 369 ಚಾರ್ಜಿಂಗ್ ಸ್ಟೇಷನ್‌ಗಳನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಲೋಕಾರ್ಪಣೆ ಮಾಡಿದರು. ಬೆಸ್ಕಾಂನ ಹಾಲಿ ಕಾರ್ಯನಿರ್ವಹಿಸುತ್ತಿರುವ 136 ಚಾರ್ಜಿಂಗ್ ಸ್ಟೇಷನ್‌ಗಳಿಗೆ 189 ಚಾರ್ಜಿಂಗ್ ಸ್ಟೇಷನ್‌ಗಳು ಹೊಸದಾಗಿ ಸೇರ್ಪಡೆಗೊಂಡಿವೆ.

## ಇವಿ ಎಕ್ಸ್ ಪೊ ಗೆ 30 ಸಾವಿರ ಜನರ ಭೇಟಿ

ಇವಿ ಎಕ್ಪೊ ದಲ್ಲಿ 100 ಕ್ಕೂ ಅಧಿಕ ವಿವಿಧ ಕಂಪನಿಗಳ/ ಉತ್ಪಾದಕರ ಮಳಿಗೆಗಳು ಪಾಲ್ಗೊಂಡು ತಮ್ಮ ವಿದ್ಯುತ್ ಚಾಲಿತ ದ್ವಿಚಕ್ರ, ತ್ರಿಚಕ್ರ ಮತ್ತು ನಾಲ್ಕು ಚಕ್ರಗಳ ವಾಹನಗಳನ್ನು ಗ್ರಾಹಕರಿಗೆ ಪ್ರದರ್ಶನ ಮಾಡಿದವು. ಸಾರ್ವಜನಿಕರಿಗೆ ಮುಕ್ತ ಅವಕಾಶ ಕಲ್ಪಿಸಿರುವ ಮೂರು ದಿನಗಳ ಇವಿ ಎಕ್ಸ್ ಪೊ ಸುಮಾರು 30 ಸಾವಿರ ಮುಂದಿ ಮಳಿಗೆಗಳಿಗೆ ಭೇಟಿ ನೀಡಿದ್ದರು.

ಮಾರುಕಟ್ಟೆಗೆ ಬಿಡುಗಡೆಯಾದ ಹೊಸ ವಿದ್ಯುತ್ ಚಾಲಿತ ದ್ವಿಚಕ್ರ ವಾಹನಗಳ ಟೆಸ್ಟ್ ರೈಡ್ ಮಾಡಲು ಎಕ್ಸ್ ಪೊ ದಲ್ಲಿ ನೂಕು-ನುಗ್ಗಲು ಏರ್ಪಟ್ಟಿತ್ತು. ಬ್ಯಾಟರಿ ಚಾಲಿತ ಫೋಲ್ಡೆಬಲ್ ಸೈಕಲ್ ಹೆಚ್ಚು ಜನರನ್ನು ಆಕರ್ಷಿಸಿತು. ಈ ಸೈಕಲ್ ಮುಂಗಡ ಬುಕ್ಕಿಂಗ್ ಭರಾಟೆ ಜೋರಾಗಿತ್ತು. ಟ್ರಾಕ್ಟರ್‌ಗಳು, ಮೂರು ಚಕ್ರದ ಸರಕು ವಾಹನಗಳು, ದ್ವಿಚಕ್ರ ವಾಹನಗಳು, ಸೈಕಲ್ ವಿವಿಧ ಕಂಪನಿಗಳ ಇವಿ ಕಾರುಗಳು ಜನರ ಗಮನ ಸೆಳೆಯಿತು.

ಎಕ್ಸ್ ಪೊದಲ್ಲಿ ಎರಡು ದಿನಗಳ ತಾಂತ್ರಿಕಗೋಷ್ಠಿ ಆಯೋಜಿಸಲಾಗಿತ್ತು. ಸರಕಾರದ ಮಟ್ಟದ ಪ್ರತಿನಿಧಿಗಳು ಹಾಗು ಇವಿ ವಲಯದಲ್ಲಿ ಪ್ರತಿನಿಧಿಗಳು ತಾಂತ್ರಿಕಗೋಷ್ಠಿಯಲ್ಲಿ ಪಾಲ್ಗೊಂಡಿದ್ದರು. ಭವಿಷ್ಯದಲ್ಲಿ ಇವಿ ಚಾರ್ಜಿಂಗ್ ಸ್ಟೇಷನ್‌ಗಳ ನಿರ್ಮಾಣ ಮತ್ತು ಮೂಲಭೂತ ಸೌಕರ್ಯಕ್ಕೆ ಸಂಬಂಧಿಸಿ ಗೋಷ್ಠಿಯಲ್ಲಿ ಚರ್ಚಿಸಲಾಯಿತು.

# ವಿಭಾಗ ಮಟ್ಟದಲ್ಲಿ ಇವಿ ಎಕ್ಸ್ ಪೊ

ಸಾರ್ವಜನಿಕರಿಗೆ ಇವಿ ಕುರಿತು ಇನ್ನಷ್ಟು ಅರಿವು ಮೂಡಿಸಲು ಇಂಧನ ಸಚಿವ **ಶ್ರೀ ವಿ. ಸುನಿಲ್ ಕುಮಾರ್** ಸೂಚಿಸಿರುವ ಹಿನ್ನೆಲೆಯಲ್ಲಿ ಬೆಸ್ಕಾಂ ಈ ಅಭಿಯಾನವನ್ನು ಮುಂದುವರಿಸಲು ನಿರ್ಧರಿಸಿದ್ದು, ಇವಿ ಎಕ್ಸ್ಪೊ ಮೇಳವನ್ನು ರಾಜ್ಯದ ವಿಭಾಗಮಟ್ಟಕ್ಕೆ ಮುಂದಿನ ದಿನಗಳಲ್ಲಿ ಕೊಂಡೊಯ್ಯಲು ನಿರ್ಧರಿಸಿದೆ. ಇವಿ ಎಕ್ಸ್ಪೊವನ್ನು ಮೈಸೂರು, ಮಂಗಳೂರು, ಹುಬ್ಬಳ್ಳಿ, ಬೆಳಗಾವಿ ಮತ್ತು ಕಲಬುರಗಿಯಲ್ಲಿ ನಡೆಸಲು ಬೆಸ್ಕಾಂ ನಿರ್ಧರಿಸಿದೆ.

ಇವಿ ಎಕ್ಸ್ ಪೊದ ಅಂಗವಾಗಿ ಜುಲೈ 2 ರಂದು ವಿಧಾನಸೌಧದಿಂದ ಅರಮನೆ ಮೈದಾನದವರೆಗೆ ಇವಿ ರ್‍ಯಾಲಿ ನಡೆಯಿತು. ಸನ್ಮಾನ್ಯ ಇಂಧನ ಸಚಿವ **ಶ್ರೀ ವಿ. ಸುನಿಲ್ ಕುಮಾರ್** ಅವರು ಸ್ವತ: ದ್ವಿಚಕ್ರ ವಾಹನವನ್ನು ವಿಧಾನಸೌಧದಿಂದ ಅರಮನೆ ಮೈದಾನದವರೆಗೆ ಚಲಾಯಿಸುವ ಮೂಲಕ ಎಕ್ಸ್ ಪೊಗೆ ಚಾಲನೆ ನೀಡಿದರು.



## ಇವಿ ಎಕ್ಸ್ ಪೊ ಯಶಸ್ಸು

ಸಮ್ಮೇಳನದಲ್ಲಿ ಒಟ್ಟು 90 ಕ್ಕೂ ಹೆಚ್ಚು ಇವಿ ಉದ್ಯಮದಾರರು ಪಾಲ್ಗೊಂಡಿದ್ದರು. 20ಕ್ಕೂ ಹೆಚ್ಚು ಸ್ಟಾರ್ಟ್ ಅಪ್ ಕಂಪನಿಗಳು ತಮ್ಮ ಉತ್ಪನ್ನಗಳನ್ನು ಪರಿಚಯಿಸಿದರು. 30000 ಕ್ಕೂ ಹೆಚ್ಚು ಗ್ರಾಹಕರು ಮೇಳದಲ್ಲಿ ಪಾಲ್ಗೊಂಡಿದ್ದರು. ಸುಮಾರು 1000 ಕ್ಕೂ ಹೆಚ್ಚು ದ್ವಿಚಕ್ರ ವಾಹನಗಳು, 50 ಕ್ಕೂ ಹೆಚ್ಚು ನಾಲ್ಕು ಚಕ್ರ ವಾಹನಗಳನ್ನು ಗ್ರಾಹಕರು ಮುಂಗಡ ಬುಕಿಂಗ್ ಮಾಡಿದರು.

## 1000 ಮೀಟರ್ ಗೆ ಬೆಸ್ಕಾಂನಿಂದ ಒಂದು ಚಾರ್ಜಿಂಗ್ ಸ್ಟೇಷನ್

2025 ರ ವೇಳೆಗೆ 5 ಲಕ್ಷಕ್ಕೂ ಹೆಚ್ಚು ಇವಿ ವಾಹನಗಳು ರಸ್ತೆಗೆ ಬರಲಿದೆ, ಹೀಗಾಗಿ ಹೆಚ್ಚು ಇವಿ ಚಾರ್ಜಿಂಗ್ ಸ್ಟೇಷನ್‌ಗಳ ಅಗತ್ಯ ಇದೆ. ಪ್ರತಿ 500 ರಿಂದ 1000 ಮೀಟರ್‌ಗೆ ಒಂದರಂತೆ ಚಾರ್ಜಿಂಗ್ ಸ್ಟೇಷನ್ ನಿರ್ಮಿಸುವ ಗುರಿಯನ್ನು ಬೆಸ್ಕಾಂ ಹೊಂದಿದ್ದು, ಮುಂದಿನ 2 ತಿಂಗಳಲ್ಲಿ 1000 ಸಾವಿರ ಚಾರ್ಜಿಂಗ್ ಸ್ಟೇಷನ್ ಗಳ ನಿರ್ಮಾಣ ಗುರಿ ನಿಗದಿಪಡಿಸಿದೆ.

ಬೆಸ್ಕಾಂನ 320 ಕ್ಕೂ ಚಾರ್ಜಿಂಗ್ ಸ್ಟೇಷನ್ ಈಗಾಗಲೇ ಕಾರ್ಯರಂಭ ಮಾಡುತ್ತಿದ್ದು, ಚಾರ್ಜಿಂಗ್ ಸ್ಟೇಷನ್‌ಗಳ ನಿರ್ಮಾಣಕ್ಕೆ ಬೆಸ್ಕಾಂನ ಏಕ ಗವಾಕ್ಷಿ ಯೋಜನೆಯಲ್ಲಿ ಅರ್ಜಿ ಸಲ್ಲಿಸಿದರೆ, 7 ದಿನಗಳಲ್ಲಿ ಚಾರ್ಜಿಂಗ್ ಸ್ಟೇಷನ್ ನಿರ್ಮಾಣಕ್ಕೆ ಅನುಮತಿ ನೀಡಲಾಗುವುದು.

ಖಾಸಗಿ ವ್ಯಕ್ತಿಗಳು, ಕಂಪನಿಗಳು ಚಾರ್ಜಿಂಗ್ ಸ್ಟೇಷನ್ ನಿರ್ಮಾಣ ಮಾಡಲು ಆಸಕ್ತಿ ಇದ್ದರೆ, 25 ಕಿ.ವ್ಯಾಟ್ ಸಾಮರ್ಥ್ಯದ ಚಾರ್ಜಿಂಗ್ ಸ್ಟೇಷನ್ ನಿರ್ಮಿಸಲು ಬೆಸ್ಕಾಂನಿಂದ ಅನುಮತಿ ದೊರೆಯಲಿದೆ.

ವಸತಿ ಸಮುಚ್ಚಯ, ವಸತಿ ಬಡಾವಣೆಗಳಲ್ಲಿ ಚಾರ್ಜಿಂಗ್ ಸ್ಟೇಷನ್ ನಿರ್ಮಾಣಕ್ಕೆ ಬೆಂಗಳೂರು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಜತೆ ಬೆಸ್ಕಾಂ ಮಾತುಕತೆ ನಡೆಸಲಿದೆ.



"ಕರ್ನಾಟಕದಲ್ಲಿ ನವೀಕರಿಸಬಹುದಾದ ಇಂಧನ ಬಳಕೆಗೆ ರಾಜ್ಯ ಸರಕಾರ ಆದ್ಯತೆ ನೀಡುತ್ತಿದ್ದು, ಇಲೆಕ್ಟ್ರಿಕ್ ವಾಹನ ಬಳಕೆ ಉತ್ತೇಜಕ್ಕೆ ಬ್ಯಾಟರಿ ಸ್ವಾಪಿಂಗ್ ಉದ್ಯಮ ಪ್ರೋತ್ಸಾಯಿಸಲು ಸರಕಾರ ಗಮನ ಹರಿಸಲಿದೆ".

**ಶ್ರೀ ಬಸವರಾಜ ಬೊಮ್ಮಾಯಿ**
ಸನ್ಮಾನ್ಯ ಮುಖ್ಯಮಂತ್ರಿ, ಕರ್ನಾಟಕ ಸರ್ಕಾರ

"ಬೆಂಗಳೂರು ದೇಶದ ಇವಿ ರಾಜಧಾನಿ ಸ್ಥಾನಮಾನ ಪಡೆಯುವ ಗುರಿ ಹೊಂದಿದ್ದು, ಇವಿಗೆ ಉತ್ತೇಜನ ನೀಡುವ ಸಲುವಾಗಿ ಒಂದೆರಡು ತಿಂಗಳಲ್ಲಿ 1008 ಕಡೆಗಳಲ್ಲಿ ಚಾರ್ಜಿಂಗ್ ಸ್ಟೇಷನ್‌ಗಳ ನಿರ್ಮಾಣ ಮಾಡಲು ಟೆಂಡರ್ ಕರೆಯಲು ನಿರ್ಧರಿಸಲಾಗಿದೆ"

**ಶ್ರೀ ವಿ. ಸುನಿಲ್ ಕುಮಾರ್**
ಸನ್ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು



# ದೇಶದ ಇವಿ ರಾಜಧಾನಿಯಾಗಿ ಬೆಂಗಳೂರು

ಹಸಿರು ಇಂಧನ ಬಳಕೆ ಉತ್ತೇಜನಕ್ಕೆ ಕೇಂದ್ರ ಹಾಗು ರಾಜ್ಯ ಸರಕಾರಗಳಿಂದ ನಿರಂತರ ಪ್ರಯತ್ನ ನಡೆಯುತ್ತಿದ್ದು, ರಾಜ್ಯ ಸರಕಾರದ ಸಹಕಾರದೊಂದಿಗೆ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ಈಗಾಗಲೇ 320 ಕ್ಕೂ ಹೆಚ್ಚು ಇವಿ ಚಾರ್ಜಿಂಗ್ ಸ್ಟೇಷನ್‌ಗಳನ್ನು ಸ್ಥಾಪಿಸಿದ್ದು, ಬೆಂಗಳೂರು ನಗರವನ್ನು ಮುಂಬರುವ ದಿನಗಳಲ್ಲಿ ಇವಿ ರಾಜಧಾನಿಯನ್ನಾಗಿ ಪರಿವರ್ತಿಸುವತ್ತ ಮಹತ್ವದ ಹೆಜ್ಜೆ ಇರಿಸಿದೆ.

2023 ರ ಮಾರ್ಚ್ ಅಂತ್ಯಕ್ಕೆ 3208 ಚಾರ್ಜಿಂಗ್ ಸ್ಟೇಷನ್‌ಗಳನ್ನು ನಿರ್ಮಿಸುವ ಗುರಿಯನ್ನು ಬೆಸ್ಕಾಂ ಹೊಂದಿದ್ದು, ಈ ನಿಟ್ಟಿನಲ್ಲಿ ಈಗಾಗಲೇ ಕಾರ್ಯಪ್ರವತಗೊಂಡಿದೆ.

ವಿದ್ಯುತ್ ಚಾಲಿತ ವಾಹನಗಳನ್ನು ಪ್ರೋತ್ಸಾಹಿಸಲು ರಾಜ್ಯ ಸರಕಾರ 2017 ರಲ್ಲಿ ಇವಿ ನೀತಿಯನ್ನು ಜಾರಿಗೆ ತಂದಿತ್ತು, ತದನಂತರ ಇವಿ ಚಾರ್ಜಿಂಗ್ ಸ್ಟೇಷನ್‌ಗಳ ನಿರ್ಮಾಣಕ್ಕೆ ಬೆಸ್ಕಾಂನ್ನು ನೋಡೆಲ್ ಏಜೆನ್ಸಿಯನ್ನಾಗಿ ನೇಮಿಸಿತ್ತು.

ಜತೆಗೆ ನೀತಿ ಆಯೋಗ, ಕರ್ನಾಟಕ ಮತ್ತು ಬ್ರಿಟನ್ ಸರಕಾರದ ಸಹಭಾಗಿತ್ವದಲ್ಲಿ ಬೆಂಗಳೂರು ನಗರವನ್ನು ಇವಿ ವಲಯವನ್ನಾಗಿ ರೂಪಿಸುವ ದಿಕ್ಸೂಚಿ ವರದಿ ಮತ್ತು ಇವಿ ಜಾಗೃತಿ ಪೋರ್ಟಲ್ ಕೂಡ ಇವಿ ಉದ್ಯಮ ಉತ್ತೇಜನಕ್ಕೆ ಇನ್ನಷ್ಟು ವೇಗ ನೀಡಿದೆ.

## ಬೆಸ್ಕಾಂ ಇವಿ ಮಿತ್ರ ಆಪ್

ಇವಿ ಚಾರ್ಜಿಂಗ್ ಸ್ಟೇಷನ್‌ಗಳ ಕುರಿತು ಸಾರ್ವಜನಿಕರಿಗೆ ಸಮಗ್ರ ಮಾಹಿತಿ ನೀಡಲು ಬೆಸ್ಕಾಂ ರೂಪಿಸಿರುವ ಇವಿ ಮಿತ್ರ ಆಪ್ ಇವಿ ಚಾರ್ಜಿಂಗ್ ಸ್ಟೇಷನ್‌ಗಳ ಮಾಹಿತಿ ಇದೀಗ ಬೆರಳ ತುದಿಯಲ್ಲಿ ಲಭ್ಯ.

ಇವಿ ಚಾರ್ಜಿಂಗ್ ಸ್ಟೇಷನ್‌ಗಳ ಕುರಿತು ಬೆಸ್ಕಾಂನ ಇವಿ ಮಿತ್ರ ಆಪ್ ಸಮಗ್ರ ಮಾಹಿತಿ ಒದಗಿಸಲಿದೆ ನೀವು ಈ ಆಪ್‌ನ್ನು ಡೌನ್‌ಲೋಡ್ ಮಾಡಿಕೊಂಡರೆ ಇವಿ ಚಾರ್ಜಿಂಗ್ ಸ್ಟೇಷನ್‌ಗಳು, ಇರುವ ಸ್ಥಳ, ಧರಪಟ್ಟಿ, ಚಾರ್ಜಿಂಗ್ ಸೌಲಭ್ಯದ ಲಭ್ಯತೆ ಮುಂತಾದ ಮಾಹಿತಿಗಳನ್ನು ಇವಿ ಮಿತ್ರ ಆಪ್‌ನಲ್ಲಿ ಪಡೆಯಬಹುದಾಗಿದೆ. ಆಪ್ ಮುಲಕ ನಿಮ್ಮ ವಾಹನವನ್ನು ಮುಂಚಿತವಾಗಿ ಚಾರ್ಜಿಂಗ್ ಮಾಡಿಕೊಳ್ಳಲು ಬುಕ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ. ಚಾರ್ಜಿಂಗ್ ಮಾಡಿದ ನಂತರ ಶುಲ್ಕವನ್ನು ಆನ್ ಲೈನ್ ನಲ್ಲಿ ಪಾವತಿಸಲು ಆಪ್‌ನಲ್ಲಿ ಅವಕಾಶವಿದೆ.

## ಏಕ ಗವಾಕ್ಷಿ ಯೋಜನೆ

ಹೊಸ ಚಾರ್ಜಿಂಗ್ ಸ್ಟೇಷನ್‌ಗಳಿಗೆ ವಿದ್ಯುತ್ ಸಂಪರ್ಕ ನೀಡಲು ಬೆಸ್ಕಾಂ **"ಏಕ ಗವಾಕ್ಷಿ"** ಯೋಜನೆ ಕೂಡ ಸಾರ್ವಜನಿಕರಿಗೆ ನೆರವಾಗಿದೆ.

ಬೆಸ್ಕಾಂ ವ್ಯಾಪ್ತಿಯಲ್ಲಿ ನಿಮಗೇನಾದರು ಇವಿ ಚಾರ್ಜಿಂಗ್ ಸ್ಟೇಷನ್ ತೆರೆಯಲು ಆಸಕ್ತಿ ಇದ್ದರೆ. ಬೆಸ್ಕಾಂನ "Single Window Dash Board" ಸೌಲಭ್ಯ ಪಡೆದುಕೊಳ್ಳಬಹುದು. ನೀವು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಪೂರಕ ದಾಖಲೆಗಳನ್ನು ಸಲ್ಲಿಸಿದ ತಕ್ಷಣವೇ ನಿಮ್ಮ ಚಾರ್ಜಿಂಗ್ ಸ್ಟೇಷನ್‌ಗೆ ವಿದ್ಯುತ್ ಸಂಪರ್ಕ ಸಿಗಲಿದೆ.

ಸಾರ್ವಜನಿಕರು, ಖಾಸಗಿ ಕಂಪನಿಗಳು ಮತ್ತು ಸಂಘ-ಸಂಸ್ಥೆಗಳು ಹೊಸ ಇವಿ ಚಾರ್ಜಿಂಗ್ ಸ್ಟೇಷನ್ ತೆರೆಯಲು ಆಸಕ್ತಿ ಇದ್ದರೆ, ಆನ್ ಲೈನ್‌ನಲ್ಲಿ ಅರ್ಜಿ ಸಲ್ಲಿಸಿ, ಅದಕ್ಕೆ ಬೇಕಾದ ಪೂರಕ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಿ, ವಿದ್ಯುತ್ ಸಂಪರ್ಕ ಪಡೆಯಬಹುದು. ಇವಿ ಚಾರ್ಜಿಂಗ್‌ಗೆ ವಿದ್ಯುತ್ ಸಂಪರ್ಕ ಪಡೆಯಲು ಬೆಸ್ಕಾಂ ಕಚೇರಿಗೆ ಅಲೆದಾಡುವುದನ್ನು ತಪ್ಪಿಸಲು ಏಕ ಗವಾಕ್ಷಿ ಯೋಜನೆ ಜಾರಿಗೆ ತರಲಾಗಿದೆ.



## ಹುಟ್ಟುಹಬ್ಬದ ಶುಭಾಶಯಗಳು

2022 ನೇ ವರ್ಷದ ಜುಲೈ–ಸೆಪ್ಟೆಂಬರ್ ತಿಂಗಳಿನಲ್ಲಿ ಹುಟ್ಟುಹಬ್ಬ ಆಚರಿಸುತ್ತಿರುವ ಬೆಸ್ಕಾಂನ ಅಧಿಕಾರಿಗಳು, ಸಿಬ್ಬಂದಿಗೆ "ಬೆಸ್ಕಾಂ ಸ್ನೇಹಿ" ಯ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.

– ಸಂಪಾದಕೀಯ ಮಂಡಳಿ



## ಹಾರ್ದಿಕ ಬೀಳ್ಕೊಡುಗೆ

ಹತ್ತು ಹಲವು ವರ್ಷ ಸೇವೆ ಸಲ್ಲಿಸಿ ಬೆಸ್ಕಾಂನ ಏಳಿಗೆಗೆ ಶ್ರಮಿಸಿ 2022 ನೇ ವರ್ಷದ ಜುಲೈ–ಸೆಪ್ಟೆಂಬರ್ ತಿಂಗಳಿನಲ್ಲಿ ನಿವೃತ್ತಿ ಹೊಂದುತ್ತಿರುವ ಅಧಿಕಾರಿಗಳು/ ಸಿಬ್ಬಂದಿಗೆ "ಬೆಸ್ಕಾಂ ಸ್ನೇಹಿ" ಯ ಹಾರ್ದಿಕ ಬೀಳ್ಕೊಡುಗೆ.

– ಸಂಪಾದಕೀಯ ಮಂಡಳಿ

# ಬೆಂಗಳೂರು ಗ್ರಾಹಕರ ಕೈ ಸೇರಿದ ಉಚಿತ ಡಿಜಿಟಲ್ ಮೀಟರ್



**ತಾವು ಬಳಸಿರುವ ವಿದ್ಯುತ್ ಪ್ರಮಾಣ, ವೋಲ್ಟೇಜ್ ಮಾಹಿತಿ ಸೇರಿದಂತೆ ಹತ್ತು ಹಲವು ಉಪಯೋಗಗಳನ್ನೊಳಗೊಂಡ ಡಿಜಿಟಲ್ ಮೀಟರ್ ಇದೀಗ ಬೆಂಗಳೂರು ಮೆಟ್ರೋಪಾಲಿಟನ್ ಪ್ರದೇಶ ವಲಯದಲ್ಲಿನ (BMAZ) ಗ್ರಾಹಕರ ಕೈ ಸೇರುತ್ತಿದೆ.**

ಹಳೆಯ ಇಲೆಕ್ಟ್ರೊ ಮೆಕಾನಿಕಲ್ ಮೀಟರ್‌ಗೆ ಬದಲಾಗಿ ಡಿಎಲ್‌ಎಂಎಸ್ ಸ್ಟ್ಯಾಟಿಕ್ ಡಿಜಿಟಲ್ ಮೀಟರ್ ಅಳವಡಿಸುವ ಕಾರ್ಯವನ್ನು ಬೆಂಗಳೂರು ಮೆಟ್ರೋಪಾಲಿಟನ್ ಪ್ರದೇಶ ವ್ಯಾಪ್ತಿಯಲ್ಲಿ ಇದೀಗ ಬೆಸ್ಕಾಂ ಕೈಗೆತ್ತಿಕೊಂಡಿದ್ದು. ಗ್ರಾಹಕರಿಗೆ ಉಚಿತವಾಗಿ ನೀಡಲಾಗುತ್ತಿದೆ.

ಸುಮಾರು 17,68000 ಇಲೆಕ್ಟ್ರೊ ಮೆಕಾನಿಕಲ್ ಮೀಟರ್‌ಗಳನ್ನು ಡಿಎಲ್‌ಎಂಎಸ್ ಸ್ಟ್ಯಾಟಿಕ್ ಮೀಟರ್‌ಗೆ ಬದಲಿಸುವ ಮೊದಲ ಹಂತದ ಕಾರ್ಯ ಕಳೆದ ಜುಲೈ ತಿಂಗಳಲ್ಲಿ ಆರಂಭಗೊಂಡಿದ್ದು, ಸೆಪ್ಟೆಂಬರ್ 6, 2022 ರ ವೇಳೆಗೆ 97,720 ಡಿಜಿಟಲ್ ಮಾಪನಗಳನ್ನು ಅಳವಡಿಸಲಾಗಿದ್ದು, ಪ್ರತಿನಿತ್ಯ 3000 ಕ್ಕೂ ಹೆಚ್ಚು ಮೀಟರ್ ಅಳವಡಿಸುವ ಗುರಿಯನ್ನು ಎರಡು ಖಾಸಗಿ ಕಂಪನಿಗಳಿಗೆ ವಹಿಸಲಾಗಿದೆ.

ಬೆಂಗಳೂರು ನಗರದಲ್ಲಿ 1768000 ಇಲೆಕ್ಟ್ರೊ ಮೆಕಾನಿಕಲ್ ಮೀಟರ್‌ಗಳನ್ನು ಡಿಜಿಟಲ್ ಮೀಟರ್‌ಗೆ ಬದಲಿಸುವ ಕಾರ್ಯ ಇನ್ನೆರಡು ವರ್ಷದಲ್ಲಿ ಪೂರ್ಣಗೊಳ್ಳಲಿದೆ.

ಈ ಡಿಜಿಟಲ್ ಮೀಟರ್‌ನ ಇನ್ನೊಂದು ಉಪಯೋಗವೇನೆಂದರೆ ಗ್ರಾಹಕರು ತಾವು ಎರಡು ವರ್ಷಗಳ ಹಿಂದಿನ ಅವಧಿಯವರೆಗೂ ಬಳಸಿದ ವಿದ್ಯುತ್ ಪ್ರಮಾಣದ ವಿವರಗಳನ್ನು ಬೆಸ್ಕಾಂ ಕಛೇರಿಯಿಂದ ಪಡೆದು ಅದನ್ನು ವಿದ್ಯುತ್ ಬಿಲ್ ಜೊತೆ ತುಲನೆ ಮಾಡಿ ತಾವು ಬಳಸಿರುವ ವಿದ್ಯುತ್ ಪ್ರಮಾಣ ಸರಿಯಾಗಿದೆಯೋ ಎಂದು ತಿಳಿಯಬಹುದಾಗಿದೆ. ಬೆಂಗಳೂರು ನಗರದಲ್ಲಿ ಡಿಜಿಟಲ್ ಮೀಟರ್‌ನ ಅಳವಡಿಕೆ ಪೂರ್ಣಗೊಂಡ ನಂತರ ಬೆಂಗಳೂರು ಗ್ರಾಮಾಂತರ ಪ್ರದೇಶ ಮತ್ತು ಚಿತ್ರದುರ್ಗ-ದಾವಣಗೆರೆ ಪ್ರದೇಶ ವಲಯದಲ್ಲಿ ಡಿಜಿಟಲ್ ಮೀಟರ್‌ಗಳ ಅಳವಡಿಕೆಗೆ ಬೆಸ್ಕಾಂ ಮುಂದಾಗಲಿದೆ.

ಡಿಜಿಟಲ್ ಮೀಟರ್ ಅಳವಡಿಕೆ ಕಾರ್ಯವನ್ನು 2 ಖಾಸಗಿ ಕಂಪನಿಗಳಿಗೆ ಗುತ್ತಿಗೆ ನೀಡಲಾಗಿದ್ದು ಮೀಟರ್ ಅಳವಡಿಕೆ ಕಾರ್ಯ ಎಲ್ಲಾ ವಿಭಾಗಗಳಲ್ಲಿ ಹಂತ ಹಂತವಾಗಿ ನಡೆಯಲಿದೆ. ರಾಜಾಜಿನಗರ, ರಾಜರಾಜೇಶ್ವರಿ ನಗರ, ವೈಟ್‌ಫೀಲ್ಡ್ ಮತ್ತು ಇಂದಿರಾನಗರದಲ್ಲಿ ಡಿಜಿಟಲ್ ಮೀಟರ್ ಅಳವಡಿಕೆ ಕಾರ್ಯ ಪೂರ್ಣಗೊಂಡ ನಂತರವೇ ಉಳಿದ ವಿಭಾಗಗಳಲ್ಲಿ ಅಳವಡಿಸಲಾಗುವುದು.

ಈ ಯೋಜನೆಯ ಒಟ್ಟು ಮೊತ್ತ 139 ಕೋಟಿ ರೂಪಾಯಿಗಳಾಗಿದ್ದು, ಸಿಂಗಲ್ ಫೇಸ್ ಡಿಜಿಟಲ್ ಮೀಟರ್‌ಗೆ 934 ರೂಪಾಯಿ ಮತ್ತು 3 ಫೇಸ್ ಮೀಟರ್‌ಗೆ 2312 ರೂಪಾಯಿಗಳಾಗಿದ್ದು ಡಿಜಿಟಲ್ ಮೀಟರ್ ವೆಚ್ಚವನ್ನು ಬೆಸ್ಕಾಂ ಭರಿಸಲಿದೆ.



## ಫೋನ್ ಇನ್ ಕಾರ್ಯಕ್ರಮ

ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರಾದ **ಶ್ರೀ ಮಹಾಂತೇಶ ಬೀಳಗಿ** ಅವರು ಸೆಪ್ಟೆಂಬರ್ 09, 2022 ರಂದು **ಪ್ರಜಾವಾಣಿ ಆಯೋಜಿಸಿದ್ದ ಫೋನ್ ಇನ್ ಕಾರ್ಯಕ್ರಮದಲ್ಲಿ** ಭಾಗವಹಿಸಿ ಸುಮಾರು ಒಂದು ಗಂಟೆಗಳ ಕಾಲ ಗ್ರಾಹಕರ ಅಹವಾಲು ಮತ್ತು ಸಮಸ್ಯೆಗಳನ್ನು ಆಲಿಸಿದರು. ಕೆಲವೊಂದು ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಸೂಚಿಸಿದರು. 40 ಕ್ಕೂ ಹೆಚ್ಚು ಗ್ರಾಹಕರ ಪ್ರಶ್ನೆಗಳಿಗೆ ಉತ್ತರಿಸಿದ ವ್ಯವಸ್ಥಾಪಕ ನಿರ್ದೇಶಕರು ಮಳೆ ಸಂದರ್ಭದಲ್ಲಿ ವಿದ್ಯುತ್ ಸಂಪರ್ಕ ಮರು ಜೋಡಿಸಲು ಬೆಸ್ಕಾಂ ಲೈನ್‌ಮನ್‌ಗಳು ತಮ್ಮ ಜೀವದ ಹಂಗು ತೊರೆದು ಮಾಡಿರುವ ಕಾರ್ಯಗಳನ್ನು ಶ್ಲಾಘಿಸಿದರು. ಫೋನ್ ಇನ್ ಜೊತೆ ಜೊತೆಗೆ ಪ್ರಜಾವಾಣಿ ಫೇಸ್ ಬುಕ್ ಮತ್ತು ಯುಟ್ಯೂಬ್ ಲೈವ್‌ನಲ್ಲಿ ಶ್ರೀ ಮಹಾಂತೇಶ್ ಬೀಳಗಿ ಮಾತನಾಡಿದರು.

## ಪವರ್‌ಮ್ಯಾನ್

ಪವರ್‌ಮ್ಯಾನ್ ಮುಟ್ಟಿದರೆ ಮುನಿಸಿಲ್ಲದೆ
ತಟ್ಟನೆ ಸೆಳೆದೊಯ್ಯುವವನ ಜೊತೆಗಿನ ಆಟ
ಒಂದು ಕ್ಷಣದ ಮರೆವಿಗೆ ಬದುಕನ್ನೆ ಪಣ
ತೆಗೆದುಕೊಂಡರೆ ಪರದಾಟ ।

ಅರಿತು ಮಾಡುವ ಕಾಯಕವಿದು
ಸುರಕ್ಷತೆಯ ಸೂತ್ರವೆ ಬೆಂಗಾವಲು
ತಿಳುವಳಿಕೆಯ ಕಾರ್ಯಶ್ರದ್ಧೆಯಲ್ಲಿ
ಉರಿವ ಬೆಂಕಿಗಿಂತ, ಬೆಳಗುವ ಬೆಳಕಾಗುವುದು ।

ಬಿಸಿಲೇ ಸುಡಲಿ, ಮಳೆಯೇ ಬರಲಿ
ಚಳಿಯು ನಡುಗಿಸಿ ಬಿಡಲಿ
ಎಲ್ಲದರಲ್ಲೂ ಎದೆಗುಂದದೆ
ಬೆಳಕನು ಹರಿಸುವ ಭರವಸೆಯೊಂದೇ ನಮಗೆ ।

ಬದುಕುಕೊಟ್ಟ ಬೆಳಕಿದು
ಜನಸೇವೆಗೊಂದು ಮಾರ್ಗವಿದು
ಪವರ್‌ಮ್ಯಾನ್ ಎಂಬ ಹೆಸರಿನಲಿ
ರಾಜ್ಯವನು ಕಟ್ಟಲು ಪವರ್
ಹರಿಸಿದ ಯೋಧನ ಕತೆಯಿದು ।

– **ಕವಿತ ಕೆ.**
ಸ.ಕಾ.ಇಂ.(ವಿ)
ಎಸ್-9 ಉಪವಿಭಾಗ,
ಬೆವಿಕಂ.

# ಯಾಣದ ಪ್ರಯಾಣ

..........ಹಿಂದಿನ ಸಂಚಿಕೆಯಿಂದ ಮುಂದುವರಿದುದು

ಆ ನೀರನ್ನು ಕಂಡು ಸ್ವಲ್ಪ ಮಟ್ಟಿಗೆ ನಿಟ್ಟುಸಿರು ಬಿಡುತ್ತಾ ನಿಲ್ಲುವುದರಲ್ಲಿ ಕಾಲಿನ ಮೇಲೆ ಪ್ಯಾಂಟಿನ ಮೇಲೆ ಓಡಾಡುತ್ತಿದ್ದ ಜಿಗಣೆಗಳನ್ನು ಕೊಡವಿಕೊಳ್ಳಲು ಶತಪ್ರಯತ್ನ ಮಾಡಬೇಕಾಯಿತು. ಹಾಗೂ-ಹೀಗೂ ಜಿಗಣೆಗಳಿಂದ ಮುಕ್ತಿ ಪಡೆದು ಕೆಲ ಕಾಲ ನೀರಿನಲ್ಲಿಯೇ ನಿಂತು ಕೊಟ್ಟ ಆಹಾರವನ್ನೆಲ್ಲಾ ಅವಸರವಸರವಾಗಿಯೇ ನುಂಗಿ, ಅದೇ ಕಣಿವೆಯ ನೀರನ್ನು ಕುಡಿದು ಸಂಪೂರ್ಣ Dehydrate ಆಗಿದ್ದ ದೇಹಕ್ಕೆ ಸಾಧ್ಯವಾದಷ್ಟು ನೀರುಣಿಸಿದೆವು. ಅಷ್ಟರಲ್ಲಿ ಹಿಂದಿನಿಂದ ಓಡಿಬಂದ ನಮ್ಮ ಗೆಳೆಯ ವೃಂದದವರು ಪಡುವ ಪಾಡನ್ನು  ನಾವು ಕಣ್ಣಾರೆ ನೋಡಿ ನಲಿಯುವಂತಾಗಿತ್ತು. ಒಂದು ಕಡೆ ಹೆದರಿಕೆ, ಮತ್ತೊಂದು ಕಡೆ ಅವರು ಪಡುವ ಪಾಡನ್ನು ನೋಡಿ ನಗು. ಹೀಗೆ ಮಿಶ್ರಿತ ಭಾವಗಳ ಸಂಗಮದಲ್ಲಿ ತೇಲಿ ಹೋಗುತ್ತಿದ್ದೆವು. ಒಬ್ಬನ ಪ್ಯಾಂಟಿನ ಮೇಲೆ, ಮತ್ತೊಬ್ಬನ socks ಮೇಲೆ, ಇನ್ನೊಬ್ಬನ shoe ಮೇಲೆ, ಮಗದೊಬ್ಬನ shoe ಒಳಗೆ ಹೀಗೆ ಸೇರಿಕೊಂಡ ಜಿಗಣೆಗಳನ್ನು ಅವು ತಮ್ಮ ರಕ್ತ ಹೀರುವ ಕೆಲಸವನ್ನು ಪ್ರಾರಂಭಿಸುವುದಕ್ಕಿಂತ ಮೊದಲೇ ಅವನ್ನು ಕಿತ್ತು ಹಾಕಿದೆವು. ಓಡುವ ಅವಸರದಲ್ಲಿ ಹೆದರಿಕೆಯ ಪರಿಣಾಮವಾಗಿ ಕೈಯಲ್ಲಿದ್ದ ಊಟದ ಪ್ಯಾಕೆಟ್ ನ್ನು ಉದುರಿಸಿಕೊಂಡು, ಮತ್ತೆ ಅದನ್ನು ಎತ್ತಿಕೊಳ್ಳುವ ಗೋಜಿಗೆ ಕೂಡ ಹೋಗದೆ ಓಡಿ ಬಂದವರ ಪಾಡಂತೂ ನೋಡುವಂತಿರಲಿಲ್ಲ, ಎಲ್ಲರೊಂದಿಗೆ ಒಂದೊಂದು ತುತ್ತು ತಿಂದು, ಹೊಟ್ಟೆ ತುಂಬಿಸಿಕೊಂಡ ಅಂತವರು ಎಲ್ಲಾ ದೇವರುಗಳನ್ನು ನೆನೆಯುವಂತಾಗಿತ್ತು. "ಮತ್ತೊಮ್ಮೆ ಯಾಣಕ್ಕೆ ಬರುತ್ತೀಯಾ!" ಎಂದು ಒಬ್ಬನಿಗೆ ಕೇಳಿದರೆ ಅವನು ಹಿಂದಿಯಲ್ಲಿ ಉತ್ತರಿಸುತ್ತಾ "ಯಾಣ! ಅರೆ ನಾನಾ" ಎಂದು ಬರಲು ನಿರಾಕರಿಸಿದನು.



ಆದರೆ ನಮ್ಮ ಪ್ರಯಾಣ ಅಷ್ಟಕ್ಕೆ ಮುಗಿದಿರಲಿಲ್ಲ, ಇನ್ನೂ ಒಂದೂವರೆ-ಎರಡು ಕಿ.ಮೀ ಓಡಬೇಕಾಗಿತ್ತು. ಕಾರಣ ತಡಮಾಡದೆ ಹೊರಡಲನುವಾದೆವು. ಅಷ್ಟರಲ್ಲಿ ಕೆಲವರು "ನಾವು ಬಂದ ದಾರಿಯಲ್ಲೆ ಹಿಂದಕ್ಕೆ ಹೋಗುತ್ತೇವೆ. ಈಗ ಪಟ್ಟ ಕಷ್ಟಗಳೇ ಸಾಕು. ಮತ್ತೆ ಮುಂದೆ ಹೋಗುವದು ಬೇಡ" ಎಂದು ಪಟ್ಟು ಹಿಡಿದಿದ್ದರು. ಆದರೂ ಹೇಗೋ, ಅವರಿಗೆ ಧೈರ್ಯ ತುಂಬಿ, ಮನವೊಲಿಸಿ ಮತ್ತೆ ಪ್ರಯಾಣ ಮುಂದುವರೆಸಿದೆವು.

ಅಲ್ಲಿಂದ ಬಿಟ್ಟ ನಮ್ಮನ್ನು ನಮ್ಮ ಹೆದರಿಕೆಯೇ ಅಟ್ಟಿಸಿಕೊಂಡು ಹೋಗುತ್ತಿತ್ತು, ಹಿಂದಕ್ಕೂ ತಿರುಗಿ ನೋಡಲು ಇಷ್ಟಪಡದೆ ಓಡುತ್ತಲಿದ್ದೆವು. ಆ ದಾರಿ ಇನ್ನೂ ಇಕ್ಕಟ್ಟಾಗಿತ್ತು. ಕಷ್ಟಪಟ್ಟು ಒಬ್ಬನು ಮಾತ್ರ ನಡೆಯಬಹುದಾಗಿತ್ತು. ನಮ್ಮ ದುರದೃಷ್ಟವೂ ಎಂಬಂತೆ ಈಗ ಎತ್ತರಕ್ಕೆ ಏರಬೇಕಾಗಿತ್ತು ಕಾಲು ಜಾರಿದರೆ ತುಂಬಾ ಅಪಾಯಕಾರಿಯಾದ ಮಾರ್ಗವದು. ಏದುಸಿರು ಬಿಡುತ್ತಾ, ನಮ್ಮನ್ನು ನಾವು ಮುಂದಕ್ಕೆ ದೂಡಿಕೊಳ್ಳುತ್ತಿದ್ದೆವು. ಆದರೂ ದಾರಿಯಲ್ಲಿ ಎದುರಾಗುವ ರಾಶಿ-ರಾಶಿ ಜಿಗಣೆಗಳು, ಅವುಗಳ ಕೆರಳಿದ ರೂಪ ಕಂಡು ಇನ್ನೂ ಭಯಪಟ್ಟಿದ್ದೆವು. ಚಿಕ್ಕ ಹಾವಿನ ಆಕಾರದಲ್ಲಿದ್ದ ಜಿಗಣೆಗಳು ಚಿಕ್ಕ ಇರುವೆಯ ಗಾತ್ರದಿಂದ 3-4 ಇಂಚುಗಳಷ್ಟು ದೊಡ್ಡವಾಗಿದ್ದವು. ತನ್ನೆಲ್ಲ ದೇಹದ ಭಾರವನ್ನು ಒಂದು ತುದಿಯ ಮೇಲೆಹಾಕಿ ಇನ್ನೊಂದು ತುದಿಯನ್ನು ಎತ್ತಿ ಮುಂದೆ ಸಾಗುತ್ತಿದ್ದ ಜಿಗಣೆಗಳ ಹಾದಿಯಲ್ಲಿ ನಮ್ಮ ಕಾಲೇನಾದರೂ ಅಡ್ಡ ಬಂದರೆ, ಆಕ್ರಮಿಸುತ್ತಿದ್ದವು.

ಹೀಗೆ ಹತ್ತುತ್ತಾ, ಇಳಿಯುತ್ತಾ ಕಾಡಿನ ದುರ್ಭರವಾದ, ದುರ್ಗಮವಾದ, ನಿರ್ಜನವಾದ ಪ್ರದೇಶದಲ್ಲಿ ಇಕ್ಕಟ್ಟಾದ ಕಾನನದ ಹಾದಿಯಲ್ಲಿ ಓಡಿ ಬರುತ್ತಿದ್ದಂತೆ ಧುತ್ತನೆ ಇದಿರುಗಡೆ ಪ್ರತ್ಯಕ್ಷವಾದ ಪರ್ವತಶ್ರೇಣಿಗಳನ್ನು ಕಂಡು ಹಿಗ್ಗಿ ಹೋದೆವು. ಆ ರಮ್ಯವಾದ ಪರಿಸರದ ಮಡಿಲಲ್ಲಿ, ಹಸುರಿನ ಹೊಸ್ತಿಲಲ್ಲಿ, ಗಿಡಮರಗಳ ಮಧ್ಯದಲ್ಲಿ, ಕಣಿವೆಗಳ ಉದರದಿಂದ ಮೇಲೆದ್ದು ಬಂದು ನಿಂತ ಹೆಬ್ಬಂಡೆಗಳ ರಾಶಿ, ಕಣ್ಣಿಗೆ ಹಬ್ಬವನ್ನು ನೀಡುತ್ತಿತ್ತು. ಇಷ್ಟು ಕಷ್ಟ ಪಟ್ಟು ಬಂದಿದ್ದಕ್ಕೂ ಸಾರ್ಥಕವಾಯಿತೆಂದು ಕಣ್ತುಂಬ ಯಾಣದ ಸಿರಿ ಸಂಪತ್ತನ್ನು ನೋಡಿ ಆನಂದಿಸಿದೆವು.  ಎತ್ತ ನೋಡಿದರತ್ತ ಹಸಿರಿನ ಹಿನ್ನೆಲೆಯ ಗರ್ಭದಿಂದ ಕಪ್ಪನೆಯ ಕಲ್ಲಿನಾಕಾರಗಳು ಭೂತಾಕಾರವಾಗಿ ಮೇಲೆದ್ದು ಆಗಸಕ್ಕೆ ಮೈಯೊಡ್ಡಿ ನಿಂತಿದ್ದವು. ನನಗೇನೊ ಇವು ಕಲ್ಲಿನ, ಬಂಡೆಗಳ ಪರ್ವತವೆನಿಸದೆ, ಕಪ್ಪು ಮೇಣದಿಂದ ಕೆತ್ತಿ ನಿಲ್ಲಿಸಿದ ಬೃಹದಾಕಾರದ ಪರ್ವತರಾಶಿಯೆಂಬಂತೆ ಭಾಸವಾಗುತ್ತಿತ್ತು . ಆ ಕಲ್ಲಿನಲ್ಲಿ ಸ್ವಾಭಾವಿಕವಾಗಿ ಕೆತ್ತಿದಂತಿದ್ದ ಆ ಚಿತ್ರ ವಿಚಿತ್ರ ಆಕೃತಿಗಳು ಎಂತಹ ಕಲಾವಿದನಿಗೂ ಒಂದು ಆಹ್ವಾನವಾಗಿ ನಿಂತಿದ್ದವು. ಚೂಪು ಚೂಪಾಗಿ ಕರಿದಾರದ ಎಳೆಗಳಂತೆ ಎದ್ದು ನಿಂತಿದ್ದ ಆ ಬಂಡೆಯ ನಾಜೂಕಾದ, ನವಿರಾದ ವಿಂಗಡನೆ ಎಂತಹ ಕವಿಗಳ, ಬರಹಗಾರರ  ಭ್ರಮೆಗಳಿಗೆ, ಕಲ್ಪನೆಗಳಿಗೆ ನಿಲುಕದಂತೆ ನಿಂತಿದ್ದವು. ಅವು ನಿಂತ ಸ್ಥಾನವೂ ಸಹ ಎಂತಹ ಸಾಹಸವೀರರಿಗೂ ಒಮ್ಮೆ ನಡುಕ ಹುಟ್ಟಿಸುವ ಗಂಭೀರ ತಾಣವಾಗಿದೆ. ನಾವಂತೂ ಕಂಡ ಮೊದಲ ದೃಶ್ಯದಲ್ಲೇ ತುಂಬಾ ಮೆಚ್ಚಿಕೊಂಡು "Admiration (Love) at first sight" ಎಂಬ proverb ನಿಜವೇ ಎಂದು ಸಾಧಿಸಿ ತೋರಿಸಿದ್ದೆವು.


– **ವೆಂಕಟೇಶ್ ಬಿ.**, ಉ.ಪ್ರ.ವ್ಯ (ಗು.ಪ್ರ ಮತ್ತು ಸು), ಬೆವಿಕಂ.

ಮುಂದುವರಿಯುವುದು.....

ಕಗ್ಗದ ಬೆಳಕು

# ಸಂತಸವಕೊಟ್ಟು ಪಡೆದುಕೊ

ಮುಳುಗದಿರು; ಜೀವನದತೆರೆಯ ಮೇಲೀಜುತಿರು |
ಒಳತನಾಗಿಸು, ಕೊಡುತ ಕೊಳುತ ಸಂತಸವ ||
ಕಳವಳಂಬಡದೆ ನಡೆಕಡೆಯಕರೆ ಬಂದಂದು |
ಮಿಳತನಿರು ವಿಶ್ವದಲಿ-ಮಂಕುತಿಮ್ಮ ||



ಸಮಾಜದೊಳಗೆ ಒಂದಾಗಿ ಬಾಳಲೇಬೇಕಾದ ಅನಿವಾರ್ಯತೆ ನಮ್ಮದು. ಇಲ್ಲಿ ಪ್ರತ್ಯೇಕ ಸಾಧ್ಯವಿಲ್ಲ. 'ಒಬ್ಬಂಟಿಯಾಗಿ ಬಾಳುತ್ತೇನೆ, ಯಾರೂ ಬೇಡ' ಎಂದು ಹೊರಟವನ ಮನದಲ್ಲೂ ಸಂಬಂಧಗಳ ಕಡೆಗೊಂದು ಗಮನವಿದ್ದೇ ಇರುತ್ತದೆ.

ತನ್ನನ್ನು ಯಾವುದಕ್ಕೋ, ಯಾರಿಗೋ ಸೇರಿದವನು ಎಂದು ಗುರುತಿಸಿಕೊಳ್ಳುವ ಹಂಬಲವು ಬಾಂಧವ್ಯಗಳನ್ನು ಬೆಸೆಯುತ್ತದೆ. ಸಮಾಜದೊಳಗೆ ತನ್ನನ್ನು ತಾನು ಗುರುತಿಸಿಕೊಳ್ಳುವುದರ ಮೂಲಕ ವ್ಯಕ್ತಿಯು ಭದ್ರತೆಯನ್ನು ಅನುಭವಿಸುತ್ತಾನೆ. ಹೀಗೆ ಪರಸ್ಪರ ಅವಲಂಬಿತರಾದ ವ್ಯಕ್ತಿಗಳು ಸೇರಿ ಸಮಾಜವು ರೂಪುಗೊಳ್ಳುತ್ತದೆ. ಈ ಸಂಬಂಧಗಳು ಉಳಿಯವುದಕ್ಕೆ, ಬೆಳೆಯುವುದಕ್ಕೆ ಕರ್ತವ್ಯ, ನನ್ನದೆನ್ನುವ ಭಾವ ಮುಂತಾದವು ಕಾರಣ ಎಂಬುದು ಮೇಲ್ನೋಟಕ್ಕೆ ಕಾಣುವ .ಸತ್ಯಗಳು. ಬಾಂಧವ್ಯಗಳು ಇನ್ನೊಬ್ಬರಿಂದ ಸಂತಸ, ಸಂತೃಪ್ತಿ, ಭದ್ರತೆಯನ್ನು ಬಯಸುತ್ತವೆ, ಈ ನಿರೀಕ್ಷೆಯು ಪೂರ್ಣವಾದರಷ್ಟೇ ಸಂಬಂಧಗಳು ಉಳಿಯುತ್ತವೆ. ಅಶಾಂತಿ ಮತ್ತು ಹಿಂಸೆಯನ್ನು ನೀಡುವಂಥವುಗಳು ಕಳಚಿಕೊಳ್ಳುತ್ತವೆ.

ಮನುಷ್ಯನು ಹೀಗೆ ಸಂಘ ಜೀವಿಯಾಗಿರುವುದರಿಂದಲೇ ಸಂಸಾರ, ಸಂಘಟನೆ, ಸಂಸ್ಥೆಗಳೆಂಬ ವ್ಯವಸ್ಥೆಗಳಿವೆ. ಬದುಕಿನ ಹಾದಿಯಲ್ಲಿ ಅದೆಷ್ಟೋ ಜನರನ್ನು ಭೇಟಿಯಾಗುವುದು, ತನ್ನದೆನ್ನುವ ಮೋಹಕ್ಕೊಳಗಾಗುವುದು ಸಾಮಾನ್ಯ.ಈ ಸಹಜತೆಯೇ ಅನೇಕ ದುರಿತ, ನೋವುಗಳನ್ನು ಎದುರಿಸುವಂತೆ ಮಾಡುತ್ತದೆ. ಕೆಲವೊಮ್ಮೆ ಈ ಮೋಹಪಾಶಗಳ ಕಾರಣದಿಂದ ಭಾವೋದ್ವೇಗಕ್ಕೆ ಒಳಗಾಗಿ ವಿವೇಚನೆ ಕಳೆದುಕೊಳ್ಳುವುದು, ನಿರಾಶರಾಗುವುದು ಇದೆ.

ರಭಸದಿಂದ ಹರಿಯುವ ನದಿಗೆ ಬಿದ್ದ ಮರದ ಕೊರಡು ಹಗುರವಾಗಿದ್ದರೆ ತೇಲುತ್ತದೆ, ಮುಂದೆ ಸಾಗುತ್ತದೆ. ಮುಂದೊಂದು ದಿನ ಯಾವುದಾದರೂ ತೀರವನ್ನದು ಸೇರಬಹುದು. ಮನುಷ್ಯನ ಜೀವನವೂ ಕಾಲ ನದಿಯಲ್ಲಿ ಮುಳುಗದೆ, ಸದಾ ಆನಂದದ ಅಲೆಯನ್ನು ಎಬ್ಬಿಸುತ್ತಾ ಪ್ರವಹಿಸಬೇಕಾದರೆ ಕಾಮ, ಕ್ರೋಧಾದಿಗಳನ್ನು ಬಾಳನೊಳಗೆ ತುಂಬಿಕೊಳ್ಳಬಾರದು.

ಯಾವುದನ್ನೂ ಅತಿಯಾಗಿ ಹಚ್ಚಿಕೊಳ್ಳದೆ; ಕರ್ತವ್ಯ ವಿಮುಖರೂ ಆಗದೆ ಒಳತನ್ನಷ್ಟೇ ಹಾರೈಸಬೇಕು. ಅಳು-ನಗುವಿನಿಂದ ಕೂಡಿದ ಜೀವಯಾನದಲ್ಲಿ ಯಾವುದೂ ಸ್ಥಾಯಿಯಾಗಿ ಉಳಿಯದು, ಎಲ್ಲವೂ ಬದಲಾಗುತ್ತಾ ಹೋಗುತ್ತದೆ. ಈ ಬದಲಾವಣೆಯೊಳಗೆ ಅನೇಕ ಜೀವ-ಜಡ ರೂಪಗಳು ಕಣ್ಮರೆಯಾಗುತ್ತವೆ. ಅನ್ಯಾಯದಿಂದಲೋ, ಸೌಭಾಗ್ಯದಿಂದಲೋ ಪಡೆವ ಸುಖ-ಸಂಪತ್ತುಗಳು ಶಾಶ್ವತವಾಗಿ ಉಳಿಯುವುದಿಲ್ಲ. ಹಾಗಾಗಿಯೇ ಇರುವಷ್ಟು ದಿನ ಎಲ್ಲರೊಂದಿಗೆ ಬೆರೆತು ಬಾಳುವುದು ಅಭ್ಯಾಸವಾಗಬೇಕು. ಸಮೂಹದೊಂದಿಗೆ ಸೇರಿ ಬದುಕುವಾಗ ಸಣ್ಣ ಸಣ್ಣ ಸಂತೋಷಗಳನ್ನಾದರೂ ಹಂಚುತ್ತಾ, ತಾನೂ ಪಡೆಯುತ್ತಾ ಅನುಭವದಲ್ಲಿ ಬದುಕು ಪಕ್ವಗೊಳ್ಳಬೇಕು.

ಸಮೂಹದಲ್ಲಿ ಮಿಳತನಾಗುವಾಗು ವ್ಯಕ್ತಿಯು ತನ್ನ ತನವನ್ನು ಕಳೆದುಕೊಂಡು ಬಲಹೀನನಾಗುವುದಲ್ಲ. ತನ್ನ ಅಸ್ಮಿತೆಯನ್ನು ಉಳಿಸಿಕೊಳ್ಳುತ್ತಾ ಲೋಕಹಿತಕ್ಕಾಗಿ ದುಡಿಯಬೇಕು. ಬಾಳಿನಲ್ಲಿ ಸಹಜವಾಗಿರುವ ಸಂಕಟದ ಅಥವಾ ಸಂತಸದ ಅಲೆಗಳಲ್ಲಿ ವ್ಯಕ್ತಿಯು ತನ್ನ ಅಸ್ತಿತ್ವವನ್ನು ಮರೆಯುವುದಲ್ಲ. ಜಗದ ಜೀವನದಲ್ಲಿ ಒಂದಾಗಿರುತ್ತಾ, ಅರಿವನ್ನು ವಿಸ್ತರಿಸುತ್ತಾ ಕೊನೆಯ ಕರೆಯು ಬಂದಂದು ಯಾವ ಬೇಸರ, ಉದ್ವೇಗವೂ ಇಲ್ಲದೆ ಹೊರಡಬೇಕು. ಈ ರೀತಿ ಸಾವಿನ ಮನೆಯ ಎದುರು ನಿಂತಿರುವ ಜೀವದೊಂದಿಗೆ ಹಲವು ಜೀವಗಳು ಸಹಭಾಗಿಗಳಾಗಿರುತ್ತವೆ. ಕಷ್ಟ-ಸುಖ, ಪ್ರೀತಿ-ದ್ವೇಷಗಳ ನೆಲೆಯಲ್ಲಿ ಬೆಸೆದಿರುತ್ತವೆ. ಯಾವಾಗ ಸಾವೆಂಬ ನಿಜ ನೆಂಟನಕರೆಯು ಬರುತ್ತದೋ ಅಂದು ಆ ಜೀವವು ಹೊರಟು ಬಿಡಲೇಬೇಕು. ಬದುಕು ತೀರಿತೆಂದು ಮರುಗಬೇಕಿಲ್ಲ. ಸಾವೆನ್ನುವುದು ಮುಕ್ತಾಯವಲ್ಲ, ಆರಂಭ. ಹಾಗಾಗಿ ಇರುವಷ್ಟು ಹೊತ್ತು ಪರಸ್ಪರ ಪ್ರತಿಸ್ಪಂದಿಸುತ್ತಾ, ಹರುಷವನ್ನು ಪಸರಿಸುತ್ತಾ, ಸಿಹಿ ನೆನಪುಗಳನ್ನು ಹಂಚಬೇಕು. ತನ್ಮೂಲಕ ಜಗದೊಳಗೊಂದಾಗಿ, ಅನಂತ ಸಾಗರದೊಳಗೆ ಸೇರಿದ ಹನಿ ಬಿಂದುವಂತೆ ಧನ್ಯರಾಗಬೇಕು.

**ಡಿ.ವಿ.ಗುಂಡಪ್ಪ ಅವರ (ಕಗ್ಗದ ಬೆಳಕು)**

# ಬೆವಿಕಂ ನಿಗಮ ಕಾರ್ಯಾಲಯದಲ್ಲಿ 76 ನೇ ಸ್ವಾತಂತ್ರ್ಯ ದಿನಾಚರಣೆ

















ಆನ್‌ಲೈನ್ ವಂಚನೆಕೋರರ ಜಾಲದ ಬಗ್ಗೆ ಎಚ್ಚರವಹಿಸುವಂತೆ ಬೆಸ್ಕಾಂ ತನ್ನ ಗ್ರಾಹಕರಿಗೆ ನಿರಂತರ ಅರಿವು ಮೂಡಿಸುತ್ತಿದೆ. ವಿದ್ಯುತ್ ಬಿಲ್ ಪಾವತಿಸುವಂತೆ ಗ್ರಾಹಕರ ಮೊಬೈಲ್‌ಗೆ ಬರುವ ಎಸ್.ಎಂ.ಎಸ್. ಅಥವಾ ಕರೆಗಳಿಗೆ ಕಿವಿಕೊಡದಂತೆ ಸಾಮಾಜಿಕ ಜಾಲತಾಣಗಳಾದ ಫೇಸ್ಬುಕ್ ಹಾಗು ಟ್ವಿಟರ್ ಖಾತೆಗಳಲ್ಲಿ ಬೆಸ್ಕಾಂ ಗ್ರಾಹಕರನ್ನು ಎಚ್ಚರಿಸುವ ಕೆಲಸ ಮಾಡುತ್ತಿದೆ. ಅಲ್ಲದೆ ಈ ಕುರಿತು ಸಾಕಷ್ಟು ಪತ್ರಿಕಾ ಪ್ರಕಟಣೆಗಳು ಮತ್ತು ಪತ್ರಿಕಾ ಜಾಹೀರಾತುಗಳನ್ನು ನೀಡಿ ಜನರನ್ನು ಎಚ್ಚರಿಸುವ ಕೆಲಸ ಮಾಡಿದ್ದರೂ ಗ್ರಾಹಕರು ಸೈಬರ್ ವಂಚಕರು ಕಳುಹಿಸುವ ಲಿಂಕ್‌ಗೆ ಹಣ ಪಾವತಿಸಿ ಮೋಸ ಹೋಗುತ್ತಿದ್ದಾರೆ.

ಗ್ರಾಹಕರಿಗೆ ವಿದ್ಯುತ್ ಬಿಲ್‌ಗಳನ್ನು ಪಾವತಿಸಲು ಕರೆ ಅಥವಾ ಎಸ್‌ಎಂಎಸ್ ಬಂದಲ್ಲಿ ತಕ್ಷಣ ಬೆಸ್ಕಾಂ ಸಹಾಯವಾಣಿ 1912 ಗೆ ಕರೆ ಮಾಡಲು ಬೆಸ್ಕಾಂ ವಿನಂತಿಸಿದೆ. ಬೆವಿಕಂ ಅಧಿಕಾರಿಗಳು ಸೈಬರ್ ವಂಚನೆ ಕುರಿತು ಗ್ರಾಹಕರಿಗೆ ಪ್ರತಿ ತಿಂಗಳ ಮೂರನೇ ಶನಿವಾರದಂದು ನಡೆಯುವ ಗ್ರಾಹಕ ಸಂವಾದ ಸಭೆಗಳಲ್ಲಿ ಮತ್ತು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳಿಗೆ ಕಾಲಕಾಲಕ್ಕೆ ಅರಿವು ಮೂಡಿಸಲು ಕೋರಲಾಗಿದೆ.

ಸ್ವಾತಂತ್ರ್ಯದ ಅಮೃತ ಮಹೋತ್ಸವ | ಬೆವಿಕಂ BESCOM

ವಿದ್ಯುತ್ ಸಂಬಂಧಿತ ದೂರುಗಳಿಗೆ

# ಬೆಸ್ಕಾಂ WHATSAPP ಸಹಾಯವಾಣಿ



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಬೆಸ್ಕಾಂ

ಬೆಸ್ಕಾಂ ಗ್ರಾಹಕರಿಗೆ ಸಿಗಲಿದೆ ವಾಟ್ಸ್‌ಆ್ಯಪ್ ಸಹಾಯವಾಣಿ.

ನಿಮ್ಮ ಜಿಲ್ಲಾ ವ್ಯಾಪ್ತಿಯ ವಿದ್ಯುತ್ ಸಮಸ್ಯೆಗಳಿಗೆ ವಾಟ್ಸ್‌ಆ್ಯಪ್ ಸಂದೇಶ ರವಾನಿಸಿ.

ವಿದ್ಯುತ್ ವ್ಯತ್ಯಯ, ಪರಿವರ್ತಕಗಳ ವಿಫಲತೆ, ಬಿಲ್ಲಿಂಗ್ ಇನ್ನಿತರ ಸಮಸ್ಯೆಗಳಿಗೆ ವಾಟ್ಸ್‌ಆ್ಯಪ್ ಪರಿಹಾರ.

ಬೆಸ್ಕಾಂನ 8 ಜಿಲ್ಲೆಗಳಿಗೆ 11 ವಾಟ್ಸ್‌ಆ್ಯಪ್ ಸಂಖ್ಯೆಗಳ ಸೇವೆ ಲಭ್ಯ.

"ವಾಟ್ಸ್‌ಆ್ಯಪ್" ಸಹಾಯವಾಣಿ ವಿವರ

**ಬೆಂಗಳೂರು ನಗರ ಜಿಲ್ಲೆ**

| | | |
|---|---|---|
| ದಕ್ಷಿಣ ವೃತ್ತ | : | 82778 84011 |
| ಪಶ್ಚಿಮ ವೃತ್ತ | : | 82778 84012 |
| ಪೂರ್ವ ವೃತ್ತ | : | 82778 84013 |
| ಉತ್ತರ ವೃತ್ತ | : | 82778 84014 |
| ಕೋಲಾರ | : | 82778 84015 |
| ಚಿಕ್ಕಬಳ್ಳಾಪುರ | : | 82778 84016 |
| ಬೆಂ. ಗ್ರಾಮಾಂತರ | : | 82778 84017 |
| ರಾಮನಗರ | : | 82778 84018 |
| ತುಮಕೂರು | : | 82778 84019 |
| ಚಿತ್ರದುರ್ಗ | : | 82778 84020 |
| ದಾವಣಗೆರೆ | : | 82778 84021 |



ಸನ್ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶ್ರೀ ವಿ. ಸುನೀಲ್ ಕುಮಾರ್ ಅವರು ಬೆಸ್ಕಾಂ ಸಹಾಯವಾಣಿ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸುತ್ತಿರುವುದು.

## 24/7 ಸಹಾಯವಾಣಿ – 1912

BESCOM | @NammaBescom | Nammabescom | helpline@bescom.co.in helplinebescom@gmail.com
Registration of online complaints – www.bescom.lpgrs.com | Bescom Mitra Mobile App


## ಸಂಪಾದಕ ಮಂಡಳಿ

| | |
|---|---|
| **ಶ್ರೀ ಮಹಾಂತೇಶ ಬೀಳಗಿ**, ವ್ಯವಸ್ಥಾಪಕ ನಿರ್ದೇಶಕರು | ಅಧ್ಯಕ್ಷರು |
| **ಶ್ರೀ ದರ್ಶನ್ ಜೆ.**, ನಿರ್ದೇಶಕರು (ಹಣಕಾಸು) | ಮುಖ್ಯ ಸಂಪಾದಕರು |
| **ಶ್ರೀ ಡಿ. ನಾಗಾರ್ಜುನ** ನಿರ್ದೇಶಕರು (ತಾಂತ್ರಿಕ) | ಮುಖ್ಯ ಸಂಪಾದಕರು |
| **ಶ್ರೀ ನಾಗರಾಜು ಎಸ್.ಆರ್.** ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ.) | ಸಂಪಾದಕರು |
| **ಶ್ರೀ ಕೆ. ತಿಪ್ಪೇಸ್ವಾಮಿ**, ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ | ಸದಸ್ಯರು |
| **ಶ್ರೀ ಕೆ.ಬಲರಾಮ್**, ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ನೌಕರರ ಸಂಘ | ಸದಸ್ಯರು |
| **ಶ್ರೀ ರಾಮಚಂದ್ರರೆಡ್ಡಿ**, ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ | ಸದಸ್ಯರು |
| **ಶ್ರೀ ಎಂ. ರವೀಂದ್ರ**, ಕವಿಪ್ರನಿನಿ ಎಸ್ಸಾಂಗಳ ಪ.ಜಾತಿ ಮತ್ತು ವರ್ಗದವರ ಅಧಿಕಾರಿಗಳ ಸಂಘ | ಸದಸ್ಯರು |
| **ಶ್ರೀ ಬಿ.ಮನೋಜ್‌ಕುಮಾರ್**, ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮಾ ಇಂ. ಸಂಘ | ಸದಸ್ಯರು |


## ಮನವಿ

**ಬೆಸ್ಕಾಂ ಸ್ನೇಹಿ** ಗೃಹಪತ್ರಿಕೆಯಲ್ಲಿ ಪ್ರಕಟಣೆಗಾಗಿ ನಿಮ್ಮ ಅಭಿಪ್ರಾಯ, ಸಲಹೆ, ಲೇಖನ, ಕಛೇರಿಯಲ್ಲಿ ಏರ್ಪಡಿಸಿದ ಕಾರ್ಯಕ್ರಮ, ಸಮಾರಂಭಗಳ ಬಗ್ಗೆ ವರದಿಗಳು, ಅಧಿಕಾರಿ / ಸಿಬ್ಬಂದಿ ವರ್ಗದವರ ಸಾಧನೆಗಳ ಬಗ್ಗೆ ಮಾಹಿತಿಗಳನ್ನು ಕಳುಹಿಸಬೇಕಾದ ವಿಳಾಸ : **ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ.) ನಿಗಮ ಕಾರ್ಯಾಲಯ, ಬೆ.ವಿ.ಕಂಪನಿ, ಕೆ.ಆರ್.ವೃತ್ತ, ಬೆಂಗಳೂರು-560 001.**
ಇ-ಮೇಲ್ ವಿಳಾಸ : gmcr@bescom.co.in

ಬೆವಿಕಂ BESCOM

**ವಿದ್ಯುತ್ ಸಂಬಂಧಿತ ಯಾವುದೇ ಸಹಾಯಕ್ಕಾಗಿ 24 ಗಂಟೆಗಳ ಸಹಾಯವಾಣಿ 1912**
**ಇ-ಮೇಲ್ ವಿಳಾಸ** : helplinebescom@gmail.com **ವೆಬ್‌ಸೈಟ್** : www.bescom.org